ಸ್ವಾತಂತ್ರ್ಯದ ಅಮೃತಮಹೋತ್ಸವ

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ಅಂತರ್ಜಾಲ : https://kptcl.karnataka.gov.in

ದೂರವಾಣಿ ಸಂಖ್ಯೆ : 080-22212343

ಇ-ಮೇಲ್ ವಿಳಾಸ : director.ahr.kptcl@gmail.com

**ವಿಷಯ:** ಮುಂಬಡ್ತಿಯಲ್ಲಿ ಬ್ಯಾಕಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಬಿಂದುಗಳನ್ನು ಗುರುತಿಸುವ ಬಗ್ಗೆ.

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮ 2022 ದಿನಾಂಕ: 28.12.2022.
2. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/5411/96-97 ದಿನಾಂಕ: 20.01.2023
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 121 ಸೇನೆನಿ 2020 ದಿನಾಂಕ: 28.03.2023.
4. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/5411/96-97 ದಿನಾಂಕ: 27.06.2023.
5. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 266 ಸೇನೆನಿ 2022 ದಿನಾಂಕ: 28.11.2023.

**ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/5411/96-97, ಬೆಂಗಳೂರು, ದಿನಾಂಕ:** - 5 JAN 2024

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮುಂಬಡ್ತಿ ಬ್ಯಾಕಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಎದ್ದು ಕಾಣುವ ಅಂಗವೈಕಲ್ಯವನ್ನುಳ್ಳ ನೌಕರರಿಗೆ ಮುಂಬಡ್ತಿಯಲ್ಲಿ ಈಗಾಗಲೇ ಗುರುತಿಸಲಾಗಿರುವ ರೋಸ್ಟರ್ ಬಿಂದುಗಳನ್ನು ಒಗ್ಗೂಡಿಸಿ ಒಂದೇ ರೋಸ್ಟರನ್ನು ನಿಗಧಿಪಡಿಸಿ ಸರ್ಕಾರವು ಹೊರಡಿಸಿರುವ ಆದೇಶ ಸಂಖ್ಯೆ: ಸಿಆಸುಇ 266 ಸೇನೆನಿ 2022 ದಿನಾಂಕ: 28.11.2023 ನ್ನು ನಿಗಮದಲ್ಲಿ ಅಳವಡಿಸಿಕೊಳ್ಳಲಾಗಿದೆ:

ಸರ್ಕಾರದ ದಿನಾಂಕ: 28.11.2023 ರ ಆದೇಶವನ್ನು ಅನುಬಂಧ-1 ಎಂದು ಈ ಆದೇಶದೊಂದಿಗೆ ಲಗತ್ತಿಸಲಾಗಿದೆ.

ನಿರ್ದೇಶಕರು

(ಆಡಳಿತ ಮತ್ತು ಮಾನವ ಸಂಪನ್ಮೂಲ)

ಗೆ:

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು (ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.

4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/ನಿರ್ದೇಶಕರು(ಹಣಕಾಸು)/ ನಿರ್ದೇಶಕರು(ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

   https://kptcl.karnataka.gov.in for information of:
6. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-**

1. ಶ್ರೀ.ಆರ್.ಹೆಚ್.ಲಕ್ಷ್ಮೀಪತಿ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂ.ಸಂ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಕೆ.ಶಿವಣ್ಣ, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ (ನೋಂ.ಸಂ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ (ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮಾ ಇಂಜಿನಿಯರುಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ /ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ್ನ ಕಾರ್ಯದರ್ಶಿ, ಕವಿಪ್ರನಿನಿ ಪಿಂಚಣಿದಾರರ ಸಂಘ, ಕಾವೇರಿ ಭವನ, ಬೆಂಗಳೂರು.

ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/5411/96-97 ದಿನಾಂಕ: - 5 JAN 2024 ರ ಅನುಬಂಧ-1


# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೧<br>Part – I | ಬೆಂಗಳೂರು, ಮಂಗಳವಾರ, ೨೮, ನವೆಂಬರ್, ೨೦೨೩(ಮಾರ್ಗಶಿರ, ೦೭, ಶಕವರ್ಷ, ೧೯೪೫)<br>BENGALURU, TUESDAY , 28, NOVEMBER, 2023( MARGASHIRA, 07, SHAKAVARSHA, 1945) | ನಂ. ೫೪೬<br>No. 546 |
|---|---|---|


## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ಮುಂಬಡ್ತಿಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಬಿಂದುಗಳನ್ನು ಗುರುತಿಸುವ ಬಗ್ಗೆ.

**ಓದಲಾಗಿದೆ:**

(1) ದಿನಾಂಕ: 27.04.1978ರ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್ ಬಿಸಿ 77.
(2) ದಿನಾಂಕ: 30.08.1979ರ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 22 ಎಸ್ ಬಿಸಿ 79.
(3) ದಿನಾಂಕ: 1.4.1992ರ ಅಧಿಸೂಚನೆ ಸಂಖ್ಯೆ: ಸಿಆಸುಇ 13 ಸೇನೆನಿ 92.
(4) ದಿನಾಂಕ: 24.06.1997ರ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 10 ಎಸ್‌ಬಿಸಿ 97.
(5) ದಿನಾಂಕ: 04.03.2015ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 23(i) ಸೇನೆನಿ 2015.
(6) ದಿನಾಂಕ: 23.10.2022ರ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 29 ಶಾಸನ 2022.
(7) ದಿನಾಂಕ: 28.12.2022ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮ 2022.
(8) ದಿನಾಂಕ: 28.03.2023ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 121 ಸೇನೆನಿ 2020.

**ಪ್ರಸ್ತಾವನೆ :**

1. ಮೇಲೆ (5)ರಲ್ಲಿ ಓದಲಾದ ದಿನಾಂಕ: 4.3.2015ರ ಸರ್ಕಾರಿ ಆದೇಶದಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಮುಂಬಡ್ತಿ ಬ್ಯಾಕ್‌ಲಾಗ್‌ನ್ನು ಭರ್ತಿ ಮಾಡಲು ದಿನಾಂಕ: 24.6.1997ರ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಿದ್ದ ಹೆಚ್ಚುವರಿ ಬಿಂದುಗಳನ್ನು ರದ್ದುಪಡಿಸಿ, 33 ಬಿಂದುಗಳ ಒಂದು ರೋಸ್ಟರ್ ವರ್ತುಲದಲ್ಲಿ ಪರಿಶಿಷ್ಟ ಜಾತಿಗೆ ಹಾಲಿ ನಿಗದಿಪಡಿಸಿದ್ದ ಬಿಂದುಗಳ ಜೊತೆಗೆ 9 ಗರಿಷ್ಟ ಹೆಚ್ಚುವರಿ ಬಿಂದುಗಳನ್ನು ಹಾಗೂ ಪರಿಶಿಷ್ಟ ಪಂಗಡಕ್ಕೆ ಹಾಲಿ ನಿಗದಿಪಡಿಸಿದ್ದ ಬಿಂದುವಿನ ಜೊತೆಗೆ ಗರಿಷ್ಠ 1 ಹೆಚ್ಚುವರಿ ಬಿಂದುವನ್ನು ಗುರುತಿಸಲಾಗಿದೆ.

2. ಮೇಲೆ (6) ರಲ್ಲಿ ಓದಲಾದ ದಿನಾಂಕ: 23.10.2022ರ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧ್ಯಾದೇಶ, 2022ನ್ನು ಹೊರಡಿಸಲಾದ ಹಿನ್ನೆಲೆಯಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ನೌಕರರಿಗೆ

ಮುಂಬಡ್ತಿಯಲ್ಲಿ ಮೀಸಲಾತಿ ಕಲ್ಪಿಸಲು ಮೇಲೆ (7)ರಲ್ಲಿ ಓದಲಾದ ದಿನಾಂಕ 28.12.2022ರ ಆದೇಶದ ಅನುಬಂಧದಲ್ಲಿ 100 ಬಿಂದುಗಳ ಪರಿಷ್ಕೃತ ರೋಸ್ಟರನ್ನು ನಿಗದಿಪಡಿಸಿ ಪ್ರತಿಸ್ಥಾಪಿಸಲಾಗಿದೆ.

3. ದಿನಾಂಕ: 23.10.2022ರ ಅಧಿಸೂಚನೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ನಿಗದಿಪಡಿಸಿದ್ದ ಮೀಸಲಾತಿ ಪ್ರಮಾಣವನ್ನು ಅನುಕ್ರಮವಾಗಿ ಶೇಕಡ 15ರಿಂದ ಶೇಕಡ 17ಕ್ಕೆ ಮತ್ತು ಶೇಕಡ 3ರಿಂದ 7ಕ್ಕೆ ಹೆಚ್ಚಿಸಿದ ಹಿನ್ನೆಲೆಯಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮುಂಬಡ್ತಿ ಬ್ಯಾಕ್‌ಲಾಗ್‌ನ್ನು ಭರ್ತಿ ಮಾಡುವ ಕುರಿತು ಪರಿಶೀಲಿಸಿ ಅಭಿಪ್ರಾಯ ನೀಡುವಂತೆ ಸಮಾಜ ಕಲ್ಯಾಣ ಇಲಾಖೆಯನ್ನು ಕೋರಲಾಗಿತ್ತು. ಪ್ರಸ್ತಾವನೆಯನ್ನು ಪರಿಶೀಲಿಸಿದ ಸಮಾಜ ಕಲ್ಯಾಣ ಇಲಾಖೆಯು ದಿನಾಂಕ: 28.12.2022ರ ಆದೇಶದಲ್ಲಿ ನಿಗದಿಪಡಿಸಿರುವ ರೋಸ್ಟರ್ ಬಿಂದುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಅನುಕ್ರಮವಾಗಿ 15 ಹಾಗೂ 7 ಹೆಚ್ಚುವರಿ ಬಿಂದುಗಳನ್ನು ನಿಗದಿಪಡಿಸಿ ಸೂಕ್ತ ಆದೇಶ ಹೊರಡಿಸುವಂತೆ ಅಭಿಪ್ರಾಯ ನೀಡಿರುತ್ತದೆ.

4. ಮೇಲೆ (8) ರಲ್ಲಿ ಓದಲಾದ ದಿನಾಂಕ: 28.03.2023ರ ಆದೇಶದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಡಿ ಮತ್ತು ಗ್ರೂಪ್-ಸಿ ವೃಂದಗಳಿಗೆ ಸೇರಿದ ಹುದ್ದೆಗಳಿಗೆ ನೀಡುವ ಮುಂಬಡ್ತಿಯಲ್ಲಿ ಎದ್ದು ಕಾಣುವ ಅಂಗವೈಕಲ್ಯವನ್ನುಳ್ಳ ಸರ್ಕಾರಿ ನೌಕರರಿಗೆ ಶೇಕಡ 4 ರಷ್ಟು ಮೀಸಲಾತಿ ಆಸ್ಪದವನ್ನು ಕಲ್ಪಿಸಲಾಗಿದೆ. ಈ ಮೀಸಲಾತಿಯನ್ನು ಜಾರಿಗೊಳಿಸಲು ಸದರಿ ಆದೇಶದ ಅನುಬಂಧದಲ್ಲಿ 100 ಬಿಂದುಗಳ ರೋಸ್ಟರನ್ನು ನಿಗದಿಪಡಿಸಲಾಗಿದೆ.

5. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮುಂಬಡ್ತಿ ಬ್ಯಾಕ್‌ಲಾಗ್‌ನ್ನು ಭರ್ತಿ ಮಾಡಲು ಗುರುತಿಸಬೇಕಾಗಿರುವ ರೋಸ್ಟರ್ ಬಿಂದುಗಳನ್ನು ಮತ್ತು ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ನೌಕರರಿಗೆ ಮುಂಬಡ್ತಿಯಲ್ಲಿ ಈಗಾಗಲೇ ಗುರುತಿಸಲಾಗಿರುವ ರೋಸ್ಟರ್ ಬಿಂದುಗಳನ್ನು ಒಗ್ಗೂಡಿಸಿ ಒಂದೇ ರೋಸ್ಟರ್‌ನ್ನು ನಿಗದಿಪಡಿಸುವುದು ಸೂಕ್ತವೆಂದು ಮನಗಾಣಲಾಗಿದೆ. ಅದರಂತೆ, ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 266 ಸೇನೆನಿ 2022, ಬೆಂಗಳೂರು, ದಿನಾಂಕ:28.11.2023</u>**

6. ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮುಂಬಡ್ತಿ ಬ್ಯಾಕ್‌ಲಾಗ್‌ನ್ನು ಭರ್ತಿ ಮಾಡಲು ಮತ್ತು ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ನೌಕರರಿಗೆ ಮುಂಬಡ್ತಿಯಲ್ಲಿ ಈಗಾಗಲೇ ಗುರುತಿಸಲಾಗಿರುವ ರೋಸ್ಟರ್ ಬಿಂದುಗಳನ್ನು ಒಗ್ಗೂಡಿಸಿ ಒಂದೇ ರೋಸ್ಟರನ್ನು ನಿಗದಿಪಡಿಸಲು ಈ ಕೆಳಕಂಡಂತೆ ಆದೇಶಿಸಲಾಗಿದೆ:-

***ಮುಂಬಡ್ತಿಯಲ್ಲಿ ಬ್ಯಾಕ್ ಲಾಗ್:***

***1. ಗ್ರೂಪ್-ಸಿ ಯಿಂದ ಗ್ರೂಪ್-ಬಿ ಮತ್ತು ಗ್ರೂಪ್-ಬಿ ಯಿಂದ ಗ್ರೂಪ್-ಎ (ಕಿರಿಯ ಶ್ರೇಣಿ) ಹುದ್ದೆಗಳಿಗೆ ಮುಂಬಡ್ತಿ ನೀಡಲು***

ರಾಜ್ಯ ಸಿವಿಲ್ ಸೇವೆಗಳಲ್ಲಿನ **ಗುಂಪು "ಎ" (ಕಿರಿಯ ಶ್ರೇಣಿ) ಮತ್ತು ಗುಂಪು "ಬಿ"** ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮುಂಬಡ್ತಿ ನೀಡುವ ಸಂದರ್ಭದಲ್ಲಿ ದಿನಾಂಕ:28.12.2022ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 2 ಸೆಹಿಮ 2022ರ ಅನುಬಂಧದಲ್ಲಿ ನಿಗದಿಪಡಿಸಿರುವ 100 ಬಿಂದುಗಳ ರೋಸ್ಟರನ್ನು ಯಥಾವತ್ತಾಗಿ ಅನುಸರಿಸುವಂತೆ ತಿಳಿಸಲಾಗಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಮುಂಬಡ್ತಿ ಬ್ಯಾಕ್‌ಲಾಗ್‌ನ್ನು ಭರ್ತಿ ಮಾಡಲು ಪರಿಶಿಷ್ಟ ಜಾತಿಗೆ ಹಾಲಿ ನಿಗದಿಪಡಿಸಿರುವ ಬಿಂದುಗಳ ಜೊತೆಗೆ **4, 10, 18, 29, 33, 37, 44, 50, 57, 63, 70, 75, 85, 90, 96** ಹೆಚ್ಚುವರಿ ಬಿಂದುಗಳನ್ನು ಗುರುತಿಸಲಾಗಿದೆ. ಪರಿಶಿಷ್ಟ ಪಂಗಡಕ್ಕೆ ಹಾಲಿ ನಿಗದಿಪಡಿಸಿರುವ ಬಿಂದುಗಳ ಜೊತೆಗೆ **12, 23, 42, 58, 65, 78, 86** ಹೆಚ್ಚುವರಿ ಬಿಂದುಗಳನ್ನು ಗುರುತಿಸಲಾಗಿದೆ. (**ಅನುಬಂಧ-1**)

**2. ಗ್ರೂಪ್-ಡಿ ಯಿಂದ ಗ್ರೂಪ್-ಸಿ ಮತ್ತು ಗ್ರೂಪ್-ಸಿ ವೃಂದದ ಹುದ್ದೆಗಳಿಗೆ ಮುಂಬಡ್ತಿ ನೀಡಲು**

**(i)** ಮುಂದುವರೆದು, **ಗುಂಪು "ಡಿ" ಮತ್ತು ಗುಂಪು "ಸಿ"** ಹುದ್ದೆಗಳಿಗೆ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಮೇಲಿನ ಕಂಡಿಕೆ (6)(1)ರಲ್ಲಿ ತಿಳಿಸಿರುವಂತೆಯೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಅದೇ ಹೆಚ್ಚುವರಿ ಬಿಂದುಗಳನ್ನು ಗುರುತಿಸಲಾಗಿದೆ. (**ಅನುಬಂಧ-2**)

**(ii) ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ನೌಕರರಿಗೆ :-**

ಎದ್ದುಕಾಣುವ ಅಂಗವೈಕಲ್ಯವನ್ನುಳ್ಳ ನೌಕರರಿಗೆ **ಗುಂಪು "ಡಿ" ಮತ್ತು ಗುಂಪು "ಸಿ"** ಹುದ್ದೆಗಳಿಗೆ ಮುಂಬಡ್ತಿ ನೀಡುವ ಸಂದರ್ಭದಲ್ಲಿ ದಿನಾಂಕ:28.12.2022ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 2 ಸೆಹಿಮ 2022ರ ಅನುಬಂಧದಲ್ಲಿ ನಿಗದಿಪಡಿಸಿರುವ 100 ಬಿಂದುಗಳ ರೋಸ್ಟರಿನಲ್ಲಿ 5, 30, 55 ಮತ್ತು 82ನೇ ಬಿಂದುಗಳನ್ನು ಗುರುತಿಸಲಾಗಿದೆ.

ದಿನಾಂಕ:28.03.2023ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 121 ಸೇನೆನಿ 2020ರ ಅನುಬಂಧದಲ್ಲಿ ನಿಗದಿಪಡಿಸಿರುವ ರೋಸ್ಟರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ. ದಿನಾಂಕ:28.03.2023ರ ಸದರಿ ಆದೇಶದಲ್ಲಿನ ಇತರ ಉಪಬಂಧಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

7. ಈಗಾಗಲೇ 100 ಬಿಂದುಗಳ ರೋಸ್ಟರ್ ವರ್ತುಲವನ್ನು ಅನುಸರಿಸಿ ಮುಂಬಡ್ತಿ ನೀಡಿದ್ದಲ್ಲಿ, ಯಾವ ಬಿಂದುವಿನವರೆಗೆ ಮುಂಬಡ್ತಿ ನೀಡಲಾಗಿದೆಯೋ ಆ ನಂತರದ ಬಿಂದುವಿನಿಂದ ಮುಂದುವರೆಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
(ವೀರಭದ್ರು)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1).

## ***ಅನುಬಂಧ-1***
## ***ಗ್ರೂಪ್-ಸಿ ಯಿಂದ ಗ್ರೂಪ್-ಬಿ ಮತ್ತು ಗ್ರೂಪ್-ಬಿ ಯಿಂದ ಗ್ರೂಪ್-ಎ (ಕಿರಿಯ ಶ್ರೇಣಿ)***
## **ಹುದ್ದೆಗಳಿಗೆ ಮುಂಬಡ್ತಿ ನೀಡಲು ಬ್ಯಾಕ್ ಲಾಗ್ ಬಿಂದುಗಳು**

| | | | | | | | |
|---|---|---|---|---|---|---|---|
| 01 | **ಪ.ಜಾ.** | 26 | ಮೀಸಲು ರಹಿತ | 51 | ಮೀಸಲು ರಹಿತ | 76 | **ಪ.ಜಾ.** |
| 02 | **ಪ.ಪಂ** | 27 | **ಪ.ಜಾ.** | 52 | ಮೀಸಲು ರಹಿತ | 77 | ಮೀಸಲು ರಹಿತ |
| 03 | ಮೀಸಲು ರಹಿತ | 28 | ಮೀಸಲು ರಹಿತ | 53 | ಮೀಸಲು ರಹಿತ | 78 | ಮೀಸಲು ರಹಿತ |
| 04 | ಮೀಸಲು ರಹಿತ | 29 | ಮೀಸಲು ರಹಿತ | 54 | **ಪ.ಜಾ.** | 79 | ಮೀಸಲು ರಹಿತ |
| 05 | ಮೀಸಲು ರಹಿತ | 30 | ಮೀಸಲು ರಹಿತ | 55 | ಮೀಸಲು ರಹಿತ | 80 | **ಪ.ಜಾ.** |
| 06 | ಮೀಸಲು ರಹಿತ | 31 | ಮೀಸಲು ರಹಿತ | 56 | ಮೀಸಲು ರಹಿತ | 81 | ಮೀಸಲು ರಹಿತ |
| 07 | **ಪ.ಜಾ.** | 32 | ಮೀಸಲು ರಹಿತ | 57 | ಮೀಸಲು ರಹಿತ | 82 | ಮೀಸಲು ರಹಿತ |
| 08 | ಮೀಸಲು ರಹಿತ | 33 | ಮೀಸಲು ರಹಿತ | 58 | ಮೀಸಲು ರಹಿತ | 83 | **ಪ.ಪಂ** |
| 09 | ಮೀಸಲು ರಹಿತ | 34 | **ಪ.ಜಾ.** | 59 | ಮೀಸಲು ರಹಿತ | 84 | ಮೀಸಲು ರಹಿತ |
| 10 | ಮೀಸಲು ರಹಿತ | 35 | **ಪ.ಪಂ.** | 60 | **ಪ.ಜಾ.** | 85 | ಮೀಸಲು ರಹಿತ |
| 11 | ಮೀಸಲು ರಹಿತ | 36 | ಮೀಸಲು ರಹಿತ | 61 | ಮೀಸಲು ರಹಿತ | 86 | ಮೀಸಲು ರಹಿತ |
| 12 | ಮೀಸಲು ರಹಿತ | 37 | ಮೀಸಲು ರಹಿತ | 62 | ಮೀಸಲು ರಹಿತ | 87 | **ಪ.ಜಾ.** |
| 13 | ಮೀಸಲು ರಹಿತ | 38 | ಮೀಸಲು ರಹಿತ | 63 | ಮೀಸಲು ರಹಿತ | 88 | ಮೀಸಲು ರಹಿತ |
| 14 | **ಪ.ಜಾ.** | 39 | ಮೀಸಲು ರಹಿತ | 64 | ಮೀಸಲು ರಹಿತ | 89 | ಮೀಸಲು ರಹಿತ |
| 15 | ಮೀಸಲು ರಹಿತ | 40 | **ಪ.ಜಾ.** | 65 | ಮೀಸಲು ರಹಿತ | 90 | ಮೀಸಲು ರಹಿತ |
| 16 | ಮೀಸಲು ರಹಿತ | 41 | ಮೀಸಲು ರಹಿತ | 66 | ಮೀಸಲು ರಹಿತ | 91 | ಮೀಸಲು ರಹಿತ |
| 17 | **ಪ.ಪಂ.** | 42 | ಮೀಸಲು ರಹಿತ | 67 | **ಪ.ಜಾ.** | 92 | ಮೀಸಲು ರಹಿತ |
| 18 | ಮೀಸಲು ರಹಿತ | 43 | ಮೀಸಲು ರಹಿತ | 68 | **ಪ.ಪಂ.** | 93 | **ಪ.ಜಾ.** |
| 19 | ಮೀಸಲು ರಹಿತ | 44 | ಮೀಸಲು ರಹಿತ | 69 | ಮೀಸಲು ರಹಿತ | 94 | ಮೀಸಲು ರಹಿತ |
| 20 | ಮೀಸಲು ರಹಿತ | 45 | ಮೀಸಲು ರಹಿತ | 70 | ಮೀಸಲು ರಹಿತ | 95 | ಮೀಸಲು ರಹಿತ |
| 21 | **ಪ.ಜಾ.** | 46 | ಮೀಸಲು ರಹಿತ | 71 | ಮೀಸಲು ರಹಿತ | 96 | ಮೀಸಲು ರಹಿತ |
| 22 | ಮೀಸಲು ರಹಿತ | 47 | **ಪ.ಜಾ.** | 72 | ಮೀಸಲು ರಹಿತ | 97 | ಮೀಸಲು ರಹಿತ |
| 23 | ಮೀಸಲು ರಹಿತ | 48 | ಮೀಸಲು ರಹಿತ | 73 | **ಪ.ಜಾ.** | 98 | **ಪ.ಪಂ.** |
| 24 | ಮೀಸಲು ರಹಿತ | 49 | **ಪ.ಪಂ.** | 74 | ಮೀಸಲು ರಹಿತ | 99 | ಮೀಸಲು ರಹಿತ |
| 25 | **ಪ.ಜಾ.** | 50 | ಮೀಸಲು ರಹಿತ | 75 | ಮೀಸಲು ರಹಿತ | 100 | ಮೀಸಲು ರಹಿತ |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಪ್ರಸ್ತುತ ಬಿಂದುಗಳು: ಪ.ಜಾ - 1, 7, 14, 21, 25, 27, 34, 40, 47, 54, 60, 67, 73, 76, 80, 87, 93.
ಪ.ಪಂ - 2, 17, 35, 49, 68, 83, 98.

ಹೆಚ್ಚುವರಿ ಬಿಂದುಗಳು : ಪ.ಜಾ - 4, 10, 18, 29, 33, 37, 44, 50, 57, 63, 70, 75, 85, 90, 96.
ಪ.ಪಂ - 12, 23, 42, 58, 65, 78, 86.

## ಅನುಬಂಧ-2

## ಗ್ರೂಪ್-ಡಿ ಯಿಂದ ಗ್ರೂಪ್-ಸಿ ಮತ್ತು ಗ್ರೂಪ್-ಸಿ ವೃಂದದ ಹುದ್ದೆಗಳಿಗೆ ಮುಂಬಡ್ತಿ ನೀಡಲು

## ಬ್ಯಾಕ್ ಲಾಗ್ ಬಿಂದುಗಳು

| | | | | | | | |
|---|---|---|---|---|---|---|---|
| 01 | **ಪ.ಜಾ.** | 26 | ಮೀಸಲು ರಹಿತ | 51 | ಮೀಸಲು ರಹಿತ | 76 | **ಪ.ಜಾ.** |
| 02 | ಪ.ಪಂ | 27 | **ಪ.ಜಾ.** | 52 | ಮೀಸಲು ರಹಿತ | 77 | ಮೀಸಲು ರಹಿತ |
| 03 | ಮೀಸಲು ರಹಿತ | 28 | ಮೀಸಲು ರಹಿತ | 53 | ಮೀಸಲು ರಹಿತ | 78 | ಮೀಸಲು ರಹಿತ |
| 04 | ಮೀಸಲು ರಹಿತ | 29 | ಮೀಸಲು ರಹಿತ | 54 | **ಪ.ಜಾ.** | 79 | ಮೀಸಲು ರಹಿತ |
| 05 | **ಅಂಗವಿಕಲ** | 30 | **ಅಂಗವಿಕಲ** | 55 | **ಅಂಗವಿಕಲ** | 80 | **ಪ.ಜಾ.** |
| 06 | ಮೀಸಲು ರಹಿತ | 31 | ಮೀಸಲು ರಹಿತ | 56 | ಮೀಸಲು ರಹಿತ | 81 | ಮೀಸಲು ರಹಿತ |
| 07 | **ಪ.ಜಾ.** | 32 | ಮೀಸಲು ರಹಿತ | 57 | ಮೀಸಲು ರಹಿತ | 82 | ಅಂಗವಿಕಲ |
| 08 | ಮೀಸಲು ರಹಿತ | 33 | ಮೀಸಲು ರಹಿತ | 58 | ಮೀಸಲು ರಹಿತ | 83 | ಪ.ಪಂ |
| 09 | ಮೀಸಲು ರಹಿತ | 34 | **ಪ.ಜಾ.** | 59 | ಮೀಸಲು ರಹಿತ | 84 | ಮೀಸಲು ರಹಿತ |
| 10 | ಮೀಸಲು ರಹಿತ | 35 | ಪ.ಪಂ. | 60 | **ಪ.ಜಾ.** | 85 | ಮೀಸಲು ರಹಿತ |
| 11 | ಮೀಸಲು ರಹಿತ | 36 | ಮೀಸಲು ರಹಿತ | 61 | ಮೀಸಲು ರಹಿತ | 86 | ಮೀಸಲು ರಹಿತ |
| 12 | ಮೀಸಲು ರಹಿತ | 37 | ಮೀಸಲು ರಹಿತ | 62 | ಮೀಸಲು ರಹಿತ | 87 | **ಪ.ಜಾ.** |
| 13 | ಮೀಸಲು ರಹಿತ | 38 | ಮೀಸಲು ರಹಿತ | 63 | ಮೀಸಲು ರಹಿತ | 88 | ಮೀಸಲು ರಹಿತ |
| 14 | **ಪ.ಜಾ.** | 39 | ಮೀಸಲು ರಹಿತ | 64 | ಮೀಸಲು ರಹಿತ | 89 | ಮೀಸಲು ರಹಿತ |
| 15 | ಮೀಸಲು ರಹಿತ | 40 | **ಪ.ಜಾ.** | 65 | ಮೀಸಲು ರಹಿತ | 90 | ಮೀಸಲು ರಹಿತ |
| 16 | ಮೀಸಲು ರಹಿತ | 41 | ಮೀಸಲು ರಹಿತ | 66 | ಮೀಸಲು ರಹಿತ | 91 | ಮೀಸಲು ರಹಿತ |
| 17 | ಪ.ಪಂ. | 42 | ಮೀಸಲು ರಹಿತ | 67 | **ಪ.ಜಾ.** | 92 | ಮೀಸಲು ರಹಿತ |
| 18 | ಮೀಸಲು ರಹಿತ | 43 | ಮೀಸಲು ರಹಿತ | 68 | ಪ.ಪಂ. | 93 | **ಪ.ಜಾ.** |
| 19 | ಮೀಸಲು ರಹಿತ | 44 | ಮೀಸಲು ರಹಿತ | 69 | ಮೀಸಲು ರಹಿತ | 94 | ಮೀಸಲು ರಹಿತ |
| 20 | ಮೀಸಲು ರಹಿತ | 45 | ಮೀಸಲು ರಹಿತ | 70 | ಮೀಸಲು ರಹಿತ | 95 | ಮೀಸಲು ರಹಿತ |
| 21 | **ಪ.ಜಾ.** | 46 | ಮೀಸಲು ರಹಿತ | 71 | ಮೀಸಲು ರಹಿತ | 96 | ಮೀಸಲು ರಹಿತ |
| 22 | ಮೀಸಲು ರಹಿತ | 47 | **ಪ.ಜಾ.** | 72 | ಮೀಸಲು ರಹಿತ | 97 | ಮೀಸಲು ರಹಿತ |
| 23 | ಮೀಸಲು ರಹಿತ | 48 | ಮೀಸಲು ರಹಿತ | 73 | **ಪ.ಜಾ.** | 98 | ಪ.ಪಂ. |
| 24 | ಮೀಸಲು ರಹಿತ | 49 | ಪ.ಪಂ. | 74 | ಮೀಸಲು ರಹಿತ | 99 | ಮೀಸಲು ರಹಿತ |
| 25 | **ಪ.ಜಾ.** | 50 | ಮೀಸಲು ರಹಿತ | 75 | ಮೀಸಲು ರಹಿತ | 100 | ಮೀಸಲು ರಹಿತ |

ಪ್ರಸ್ತುತ ಬಿಂದುಗಳು: ಪ.ಜಾ - 1, 7, 14, 21, 25, 27, 34, 40, 47, 54, 60, 67, 73, 76, 80, 87, 93.
ಪ.ಪಂ - 2, 17, 35, 49, 68, 83, 98.

ಹೆಚ್ಚುವರಿ ಬಿಂದುಗಳು : ಪ.ಜಾ - 4, 10, 18, 29, 33, 37, 44, 50, 57, 63, 70, 75, 85, 90, 96.
ಪ.ಪಂ - 12, 23, 42, 58, 65, 78, 86.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH